ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೆರಡನೆಯ ಅಧಿವೇಶನ

ಮಂಗಳವಾರ, ದಿನಾಂಕ : 15 ನೇ ಡಿಸೆಂಬರ್, 2020

ಗುಬ್ಬಿ ಪಟ್ಟಣದ ಮಾರನಕಟ್ಟೆಯ ಜಾಗದ ಬಗ್ಗೆ

ಶ್ರೀ ಕಾಂತರಾಜ್(ಬಿಎಂಎಲ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –

675 (853) ಮಾನ್ಯ ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ತುಮಕೂರು ಜಿಲ್ಲೆ ಗುಬ್ಬಿ ಪಟ್ಟಣ ಪಂಚಾಯ್ತಿ ಎಷ್ಟು ಜನಸಂಖ್ಯೆಯನ್ನು ಹೊಂದಿದೆ; ವಾರ್ಡುಗಳ ಸಂಖ್ಯೆ ಎಷ್ಟು; ಪಟ್ಟಣ ಪಂಚಾಯ್ತಿಯ ಸರಹದ್ದು ಎಲ್ಲಿಯವರೆಗೆ ಇದೆ; (ವಿವರವಾದ ಮಾಹಿತಿ ನೀಡುವುದು)

(ಆ) ಗುಬ್ಬಿ ಪಟ್ಟಣ ಪಂಚಾಯ್ತಿ ವ್ಯಾಪ್ತಿಯಲ್ಲಿ ಮಾರನಕಟ್ಟೆ ಕೆರೆ ಇದೆಯೇ; ಹಾಗಿದ್ದಲ್ಲಿ, ಇದರ ವಿಸ್ತೀರ್ಣವೆಷ್ಟು; ಇದಕ್ಕೆ ಮಾಲೀಕರು ಯಾರು ;(ವಿವರವಾದ ಮಾಹಿತಿ ನೀಡುವುದು)

(ಇ) ಸದರಿ ಮಾರನಕಟ್ಟೆ ಕೆರೆ ಜಾಗವನ್ನು ಸರ್ಕಾರವು ಯಾವ ಯಾವ ಸಂಸ್ಥೆಗಳಿಗೆ ಗುತ್ತಿಗೆ/ಕ್ರಯಕ್ಕೆ ನೀಡಿರುತ್ತದೆ; (ವಿವರವಾಗಿ ಸಂಸ್ಥೆಯ ಹೆಸರು, ಗುತ್ತಿಗೆ/ಕ್ರಯ ನೀಡಿದ ವರ್ಷ ಹಾಗೂ ವಿಸ್ತೀರ್ಣದೊಂದಿಗೆ ಸರ್ಕಾರಿ ಆದೇಶ ಪ್ರತಿಗಳೊಂದಿಗೆ ವಿವರವಾದ ಮಾಹಿತಿ ನೀಡುವುದು)

(ಈ) ಇದರಲ್ಲಿ ಖಾಲಿ ಉಳಿದಿರುವ ಜಾಗ ಎಷ್ಟು; ಇದನ್ನು ಸರ್ಕಾರ ಯಾವ ಉದ್ದೇಶಕ್ಕೆ ಬಳಸಲು ಉದ್ದೇಶಿಸಿದೆ?